ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालयः
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.


ಕ.ಸಂ.ವಿ/ಪಿಹೆಚ್.ಡಿ/ಅಧಿಸೂಚನೆ/01/2024–25/25–26 ದಿನಾಂಕ: 21.02.2026

## ಅಧಿಸೂಚನೆ

**ವಿಷಯ: 2025–26 ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅಧಿಸೂಚನೆ.**

**ಉಲ್ಲೇಖ: ಮಾನ್ಯ ಕುಲಪತಿಯವರ ಅನುಮೋದನೆ ಕಂಡಿಕೆ ಸಂಖ್ಯೆ:117 ದಿನಾಂಕ: 19.02.2026**

****

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2025–26 ನೇ ಸಾಲಿನ ಪಿಹೆಚ್.ಡಿ ಪದವಿ ಪ್ರವೇಶಾತಿಗಾಗಿ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಲಾಗಿದೆ. **ವಿಷಯಗಳು: ಸಂಸ್ಕೃತ ಭಾಷೆ ಮತ್ತು ಸಾಹಿತ್ಯ, ಅಲಂಕಾರ, ವೇದಾಂತ, ವ್ಯಾಕರಣ, ನ್ಯಾಯ ಮತ್ತು ವೈಶೇಷಿಕ, ಹಸ್ತಪ್ರತಿಶಾಸ್ತ್ರ, ಜ್ಯೋತಿಷ್ಯ, ವೇದ ವಿಭಾಗ.**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣ www.ksu.ac.in ಅಲ್ಲಿ ವಿವರಗಳನ್ನು ನೀಡಿರುವಂತೆ ಅರ್ಜಿಯನ್ನು ಆನ್‌ಲೈನ್ ಮೂಲಕ ಭರ್ತಿಮಾಡಿ ನಿಗದಿತ ಶುಲ್ಕ ಹಾಗೂ ಅಗತ್ಯ ದಾಖಲೆಗಳೊಂದಿಗೆ ದಿನಾಂಕ:15.03.2026ರೊಳಗಾಗಿ ಸಲ್ಲಿಸುವುದು. ಅಭ್ಯರ್ಥಿಯು ಭರ್ತಿ ಮಾಡಿದ ಅರ್ಜಿ ಹಾಗೂ ಸಂಬಂಧಿಸಿದ ದಾಖಲಾತಿಗಳನ್ನು **ನಿರ್ದೇಶಕರು, ಅಧ್ಯಯನಾಂಗಕ್ಕೆ ದ್ವಿಪ್ರತಿಗಳಲ್ಲಿ** ದಿನಾಂಕ: 23.03.2026ರ ಒಳಗೆ ಸಲ್ಲಿಸತಕ್ಕದ್ದು. ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ರೂ.750/– ಗಳನ್ನು ಎಸ್.ಬಿ.ಐ ಕಲೆಕ್ಟ್ ಮುಖಾಂತರ ಪಾವತಿಸಿ ಅದರ ಮೂಲ ಪ್ರತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ **"ನಿರ್ದೇಶಕರು, ಅಧ್ಯಯನಾಂಗ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು–560018"** ಸಲ್ಲಿಸುವುದು.

ಸ್ನಾತಕೋತ್ತರ ಪದವಿ ಪಡೆದ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯ ಮೂಲಕ ಅರ್ಹರಾಗುತ್ತಾರೆ. UGC-NET/KSET/CSIR-JRF/GATE ಪರೀಕ್ಷೆಯಲ್ಲಿ ಪಾಸಾದ ಅಭ್ಯರ್ಥಿಗಳಿಗೆ ಪ್ರವೇಶ ಪರೀಕ್ಷೆಯಲ್ಲಿ ವಿನಾಯಿತಿ ಇರುತ್ತದೆ. ಆದರೆ ಆ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳ ಜೊತೆ ಮೌಖಿಕ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕಾಗಿರುತ್ತದೆ.

| ವಿವರ | ದಿನಾಂಕ |
|---|---|
| **ಅರ್ಜಿಯನ್ನು ಸಲ್ಲಿಸಲು ಆರಂಭದ ದಿನಾಂಕ:** | 21.02.2026 |
| **ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ:** | 15.03.2026 |
| **ಮುದ್ರಿತ ಅರ್ಜಿಯನ್ನು ಅಧ್ಯಯನಾಂಗಕ್ಕೆ ಸಲ್ಲಿಸಲು ಕೊನೆಯ ದಿನಾಂಕ:** | 23.03.2026 |
| **ಅರ್ಹ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ದಿನಾಂಕ** | 30.03.2026 |
| **ಪ್ರವೇಶ ಪರೀಕ್ಷೆಯ ದಿನಾಂಕ:** | 22.04.2026 |
| **ಪ್ರವೇಶ ಪರೀಕ್ಷೆಯ ಫಲಿತಾಂಶವನ್ನು ಪ್ರಕಟಿಸುವ ದಿನಾಂಕ:** | 05.05.2026 |
| **ಮೌಖಿಕ ಪರೀಕ್ಷೆಯ ದಿನಾಂಕಗಳು:** | 08.05.2026 |
| **ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ:** | 15.05.2026 |

*ಈ ಮೇಲಿನ ದಿನಾಂಕಗಳಲ್ಲಿ ಬದಲಾವಣೆಯಾದಲ್ಲಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಅಪೂರ್ಣ ಅರ್ಜಿಗಳನ್ನು ಮತ್ತು ಸೂಕ್ತ ದಾಖಲೆಗಳನ್ನು ಲಗತ್ತಿಸದಿರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು "ನಿರ್ದೇಶಕರು, ಅಧ್ಯಯನಾಂಗವನ್ನು ಸಂಪರ್ಕಿಸುವುದು. **ಅರ್ಹತೆ:** ಅಭ್ಯರ್ಥಿಯು ಸ್ನಾತಕೋತ್ತರ ಪರೀಕ್ಷೆಯಲ್ಲಿ ಕನಿಷ್ಠ 55% ಅಂಕಗಳನ್ನು ಪಡೆದಿರಬೇಕು (50% ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ ಪ್ರವರ್ಗ-1 (ಜಾತಿ ಪ್ರಮಾಣ ಪತ್ರವನ್ನುಕಡ್ಡಾಯವಾಗಿ ಸಲ್ಲಿಸತಕ್ಕದ್ದು) ಅಥವಾ ತತ್ಸಮಾನ ಪದವಿಯಲ್ಲಿ ಅರ್ಹರಾಗಿರಬೇಕು.

*ಕೊನೆಯ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಮತ್ತು ಒಮ್ಮೆ ಪಾವತಿಸಿದ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.

**ಸಾಮಾನ್ಯ ಸೂಚನೆಗಳು:**

- ಪೂರ್ಣಕಾಲಿಕ ಸಂಶೋಧನಾರ್ಥಿಗಳಿಗೆ ಪ್ರಾಶಸ್ತ್ಯ ನೀಡಲಾಗುವುದು.
- ಸರ್ಕಾರಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಖಾಯಂ ನೌಕರರಾಗಿರುವವರು ಅರ್ಜಿ ಸಲ್ಲಿಸುವ ಸಮಯದಲ್ಲಿ NOC ಸಲ್ಲಿಸಬೇಕು.
- ಅರೆಕಾಲಿಕಗುತ್ತಿಗೆ ಆಧಾರದ ಮೇಲೆ ಖಾಸಗಿ ಸಂಸ್ಥೆಗಳು/ಸರ್ಕಾರಿ/ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರು ಅರ್ಜಿ ಸಲ್ಲಿಸುವ ಸಮಯದಲ್ಲಿ NOCಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು.
- ಮುದ್ರಿತ ಅರ್ಜಿಗಳನ್ನು ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.30ರಿಂದ ಸಂಜೆ 5.30 ವರೆಗೂನಿರ್ದೇಶಕರು ಅಧ್ಯಾಯನಾಂಗದಲ್ಲಿ ಸ್ವೀಕರಿಸಲಾಗುವುದು.
- ಅರ್ಜಿಯಜೊತೆ ಲಗತ್ತಿಸಿದ ಎಲ್ಲಾ ದಾಖಲೆಗಳನ್ನು ದೃಢೀಕರಿಸಿ ಸಲ್ಲಿಸತಕ್ಕದ್ದು.
- ಮೀಸಲಾತಿ ಬಯಸುವ ಅಭ್ಯರ್ಥಿಗಳು ಪ್ರಸ್ತುತಚಾಲ್ತಿಯಲ್ಲಿರುವ ಜಾತಿ/ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಅಭ್ಯರ್ಥಿಗಳನ್ನು ಸಾಮಾನ್ಯ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು.
- ಸರ್ಕಾರಿ ಸೇವೆಯಲ್ಲಿ ಇರುವ ಅಭ್ಯರ್ಥಿಗಳು ಅಧಿಕೃತ ಪ್ರಾಧಿಕಾರದ ಮುಖಾಂತರ ಸಲ್ಲಿಸತಕ್ಕದ್ದು.
- ಪ್ರವೇಶ ಪರೀಕ್ಷೆಯಲ್ಲಿ ವಿನಾಯಿತಿ ಪಡೆದ ಅಭ್ಯರ್ಥಿಗಳೂ ಸಹ ಪ್ರವೇಶ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಸಂಬಂಧಿಸಿದ ಎರಡೂ ಅರ್ಜಿಗಳನ್ನು ಪ್ರತ್ಯೇಕವಾಗಿ ಅಭ್ಯರ್ಥಿಯು ಸಲ್ಲಿಸತಕ್ಕದ್ದು.
- ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು/ನಿರ್ದೇಶಕರು ಅಧ್ಯಯನಾಂಗದಿಂದ ಖುದ್ದಾಗಿ ಪಡೆಯತಕ್ಕದ್ದು.
- ವಿಶ್ವವಿದ್ಯಾಲಯವು ಉಪಲಭ್ಯ ಹುದ್ದೆಗಳನ್ನು ಭರ್ತಿ ಮಾಡುವ ಮತ್ತು ಮಾಡದೇ ಇರುವ ಹಕ್ಕನ್ನು ಕಾಯ್ದಿರಿಸಿ ಕೊಂಡಿರುತ್ತದೆ.
- ವಿದ್ಯಾರ್ಥಿಗಳು ಅಂಚೆ ಮೂಲಕ ಕಳುಹಿಸುವ ಅರ್ಜಿಗಳನ್ನು ಸ್ವೀಕರಿಸಲಾಗುವುದು ಹಾಗೂ ಅಭ್ಯರ್ಥಿಗಳಿಂದ ಯಾವುದೇ ಅಂಚೆ ವಿಳಂಬಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರವಾಗಿರುವುದಿಲ್ಲ.
- ಕರ್ನಾಟಕ ರಾಜ್ಯ ಸರ್ಕಾರದ ಮೀಸಲಾತಿ ನೀತಿಯನ್ವಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- ಅಭ್ಯರ್ಥಿಗಳು ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪದವಿ ಅಂಕಪಟ್ಟಿಗಳು, ಸ್ನಾತಕೋತ್ತರ ಪದವಿ ಅಂಕಪಟ್ಟಿಗಳು, UGC-JRF/NET/KSET Certificate, ಇತ್ತೀಚಿನಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್‌ಕಾರ್ಡ್, ಶುಲ್ಕ ಪಾವತಿಸಿದ ಪ್ರತಿ, NOCಗಳನ್ನು ಸಲ್ಲಿಸತಕ್ಕದ್ದು.
- ಪಿಹೆಚ್.ಡಿ ಸಂಬಂಧಿಸಿದಂತೆಯಾವುದೇ ಸೂಚನೆಗಳು/ತಿದ್ದುಪಡಿಗಳು ಹಾಗೂ ಇತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ಯಾವುದೇ ಕಾರಣಕ್ಕೂ ಅಭ್ಯರ್ಥಿಗಳಿಗೆ

ಅಂಚೆ/ಇ-ಮೇಲ್ ಅಥವಾ ದೂರವಾಣಿ ಕರೆಮಾಡಿ ತಿಳಿಸಲಾಗುವುದಿಲ್ಲ. ನಿಯಮಿತವಾಗಿ ವಿಶ್ವವಿದ್ಯಾಲಯದ ಜಾಲತಾಣವನ್ನು ವೀಕ್ಷಿಸಬೇಕು.

- ಕಡ್ಡಾಯವಾಗಿ Google form ಭರ್ತಿ ಮಾಡಬೇಕು ಹಾಗು ಅಧಿಸೂಚನೆಯಲ್ಲಿ ಇರುವ ಅರ್ಜಿಯನ್ನು ಭರ್ತಿಮಾಡಿ ವಿಶ್ವವಿದ್ಯಾಲಯಕ್ಕೆ ನಿಗದಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬೇಕು.
- ಎಲ್ಲಾ ಪಿಹೆಚ್.ಡಿ ಶುಲ್ಕಗಳನ್ನು ವಿಶ್ವವಿದ್ಯಾಲಯದ ಪಿಹೆಚ್.ಡಿ ಶುಲ್ಕದ ನಿಯಮಗಳ ಪ್ರಕಾರ ನಿಗದಿಪಡಿಸಲಾಗಿದೆ ಮತ್ತು ಕಾಲ ಕಾಲಕ್ಕೆ ತಿಳಿಸಲಾಗುವುದು.
- ಯಾವುದಾದರೂ ಪ್ರಶ್ನೆಗಳು/ಅನುಮಾನಗಳು/ಇತರರೆ ಮಾಹಿತಿಗಾಗಿ ಇ–ಮೇಲ್ ಮೂಲಕ ಸಂಪರ್ಕಿಸಬಹುದು. ಇ–ಮೇಲ್: ksuphdsection123@gmail.com

**ಟಿಪ್ಪಣಿ:**

- ಪ್ರವೇಶಾತಿ ಪರೀಕ್ಷೆಯು 100 ಅಂಕವುಳ್ಳ ಬಹು ಆಯ್ಕೆಯ ಪ್ರಶ್ನೆಗಳನ್ನು ಹೊಂದಿರುತ್ತದೆ. ಅದರಲ್ಲಿ 50 ಅಂಕಗಳು ಬಹು ಆಯ್ಕೆ ಪ್ರಶ್ನೆಗಳು ಮತ್ತು 50 ಅಂಕಗಳು ಸಂಬಂಧಪಟ್ಟ ವಿಷಯದಲ್ಲಿ ನಿಬಂಧಾತ್ಮಕವಾಗಿರುತ್ತದೆ. ಪರೀಕ್ಷೆಯಕಾಲಾವಧಿ 3 ಗಂಟೆಗಳಾಗಿರುತ್ತದೆ.
- ವೇದ, ವ್ಯಾಕರಣ, ನ್ಯಾಯ, ವೇದಾಂತ, ಜ್ಯೋತಿಷ, ಅಲಂಕಾರ, ಸಂಸ್ಕೃತ ಭಾಷಾ ಮತ್ತು ಸಾಹಿತ್ಯ, ರಿಸರ್ಚ್ ಮೆಥಡಾಲಜಿ ಮತ್ತು ಆಪ್ಟಿಟ್ಯೂಡ್‌ಗೆ ಸಂಬಂಧಿಸಿದ ಪ್ರಶ್ನೆಗಳಿರುತ್ತವೆ.
- ಪಿಹೆಚ್.ಡಿ ಪ್ರವೇಶಾತಿಯ ಮುಂದಿನ ಹಂತಕ್ಕೆ ಅರ್ಹರಾಗಲು, ಪ್ರವೇಶಾತಿ ಪರೀಕ್ಷೆಯಲ್ಲಿ ಅಭ್ಯರ್ಥಿಯು 100 ಅಂಕಗಳಿಗೆ ಕನಿಷ್ಠ 50 ಅಂಕಗಳನ್ನು(45 ಅಂಕಗಳು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ,ಪ್ರವರ್ಗ–1)ಪಡೆಯತಕ್ಕದ್ದು.
- ಸಂದರ್ಶನಕ್ಕೆ ಶೇಕಡ 30 ಅಂಕಗಳು ಮತ್ತು ಪ್ರವೇಶ ಪರೀಕ್ಷೆಗೆ ಶೇಕಡ 70 ಅಂಕಗಳನ್ನು ನಿಗದಿಗೊಳಿಸಿ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
- UGC-NET/KSET/CSIR-JRF ಪರೀಕ್ಷೆಯಲ್ಲಿ ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಸ್ನಾತಕೋತ್ತರ ಪದವಿ ಪರೀಕ್ಷೆಯ ಶೇ. 50 ರಷ್ಟು ಹಾಗೂ ಸಂದರ್ಶನದಲ್ಲಿ ಪಡೆದ ಶೇ. 50 ರಷ್ಟು ಅಂಕಗಳನ್ನು ಪರಿಗಣಿಸಿ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. ಆಯ್ಕೆ ಪಟ್ಟಿಯನ್ನು ಘೋಷಿಸುವ ಸಂದರ್ಭದಲ್ಲಿ ಯಾವುದೇ ಅಭ್ಯರ್ಥಿಗೆ ಸಮಾನ ಅಂಕಗಳು ಬಂದ ಪಕ್ಷದಲ್ಲಿ ಸ್ನಾತಕೋತ್ತರ ಪದವಿಯ ಅಂಕಗಳನ್ನು ಪರಿಗಣಿಸಲಾಗುವುದು.
- ಹೆಚ್ಚಿನ ಮಾಹಿತಿಗಾಗಿ ಅಧ್ಯಯನಾಂಗವನ್ನು ಸಂಪರ್ಕಿಸುವುದು. (ಅಧಿಸೂಚನೆಯ ಕೊನೆಯಲ್ಲಿ ವಿವರಗಳನ್ನು ಒದಗಿಸಲಾಗಿದೆ)
- ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ಪಡೆಯಲು ಅರ್ಹರಾಗಿರುವ ಅಭ್ಯರ್ಥಿಗಳಿಗೆ ಸಂದರ್ಶನ ದಿನಾಂಕ, ಸಮಯ ಮತ್ತು ಸ್ಥಳದ ಬಗ್ಗೆ ಪ್ರತ್ಯೇಕವಾಗಿ ತಿಳಿಸಲಾಗುತ್ತದೆ. ಪ್ರತಿಯೊಂದು ವಿವರವನ್ನು ಅಧಿಕೃತ ವಿಶ್ವವಿದ್ಯಾಲಯದ ವೆಬ್‌ಸೈಟ್ ಮೂಲಕ ತಿಳಿಸಲಾಗುತ್ತದೆ.
- ಖಾಲಿ ಇರುವ ಒಟ್ಟು ಹುದ್ದೆಗಳಲ್ಲಿ 50% ಪ್ರವೇಶ ಪರೀಕ್ಷೆ ಹಾಗೂ 50% ಪ್ರವೇಶ ಪರೀಕ್ಷೆ ವಿನಾಯತಿ (UGC-NET/KSET/JRF)ಗೆ ಕಾಯ್ದಿರಿಸಲಾಗಿದೆ.
- ಉಪಲಬ್ಧ ಪಿಹೆಚ್.ಡಿ ಸೀಟುಗಳ ವಿವರಗಳನ್ನು ಅನುಬಂಧ 1ರಲ್ಲಿ ನೀಡಲಾಗಿದೆ.

ನಿರ್ದೇಶಕರು
ಅಧ್ಯಯನಾಂಗ

ಅನುಬಂಧ–01ರಲ್ಲಿ ವಿಷಯವಾರು ಉಪಲಬ್ಧ ಪಿಹೆಚ್.ಡಿ ಸೀಟ್‌ಗಳ ವಿವರ

| ಕ್ರ. ಸಂ | ವಿಷಯಗಳು | ಸಾಮಾನ್ಯ | ಎಸ್.ಸಿ/ ಎಸ್.ಟಿ ಪ್ರವರ್ಗ–1 | ಹಿಂದುಳಿದ ವರ್ಗಗಳು(2A ,2B,3A,3B) |
|---|---|---|---|---|
| 1 | ಸಂಸ್ಕೃತ ಭಾಷೆ ಮತ್ತು ಸಾಹಿತ್ಯ | 04 | - | 01 |
| 2 | ವೇದಾಂತ | 05 | 10 | 04 |
| 3 | ನ್ಯಾಯ ಮತ್ತು ವೈಶೇಷಿಕ ವಿಭಾಗ | 03 | 06 | 04 |
| 4 | ಅಲಂಕಾರ | 01 | 02 | 03 |
| 5 | ಹಸ್ತಪ್ರತಿ ಶಾಸ್ತ್ರ | 02 | 03 | 02 |
| 6 | ವ್ಯಾಕರಣ | 01 | 06 | 03 |
| 7 | ಜ್ಯೋತಿಷ್ಯ | - | 02 | _ |
| 8 | ವೇದ | _ | 02 | 01 |
| 9 | ಮೀಮಾಂಸ | 01 | 01 | 01 |
| | ಒಟ್ಟು | 17 | 32 | 19 |

*ಸೂಚನೆ: ವಿಶೇಷ ಚೇತನದವರಿಗೆ ಒಂದು ಸ್ಥಾನ ಮೀಸಲಿಡಲಾಗುವುದು

ಗಮನಿಸಿ: ಯಾವುದೇ ಇತರ ವಿವರಗಳಿಗಾಗಿ ಕೆಳಗಿನ ಇಮೇಲ್ ವಿಳಾಸವನ್ನು ಸಂಪರ್ಕಿಸಿ:

ಇಮೇಲ್: ksuphdsection123@gmail.com

ನಿರ್ದೇಶಕರು
ಕರ್ನಾಟಕಸಂಸ್ಕೃತ ವಿಶ್ವವಿದ್ಯಾಲಯ
ಚಾಮರಾಜಪೇಟೆ